**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**

**ಎಸ್.ಸಿ. ಸಂಖ್ಯೆಃ 74/2019**

ದಿನಾಂಕಃ 29.11.2022
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 7 ಪ್ರಾಸಾ - 6

| | | |
|---|---|---|
| ಹೆಸರು | ಃ | ಶಂಕರಪ್ಪ |
| ತಂದೆಯ ಹೆಸರು | ಃ | ಹೊನ್ನಪ್ಪ |
| ವಯಸ್ಸು | ಃ | 59 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ಮೈಲನಹಳ್ಳಿ |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಈಗ ತೋರಿಸಿರುವ ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಅಂದಾಜು 2-3 ವರ್ಷದ ಹಿಂದೆ ಮಧ್ಯಾಹ್ನ 2 ಗಂಟೆಗೆ ಮೈಲನಹಳ್ಳಿಯ ಶಿವಗಂಗೆ ರಸ್ತೆಯಲ್ಲಿ ಆ ಸಹಿ ಹಾಕಿರುತ್ತೇನೆ. ಪ್ರಕಾಶ್ ಎನ್ನುವವರು ಮತ್ತು ಕಿರಣ ಎನ್ನುವವರು ಮತ್ತು ಪೊಲೀಸರು ಅಲ್ಲಿಗೆ ಬಂದಿದ್ದರು. ಅಲ್ಲಿ ಒಂದು ಹೆಂಗಸಿನ ಶವ ಇತ್ತು. ಸುಟ್ಟ ಗಾಯಗಳಿರುವ ಶವ ಬಿದ್ದಿತ್ತು. ಒಂದು ವಾಟರ್ ಕ್ಯಾನ್, ಕಾಲುಂಗುರ, ಜಡೆಗೆ ಹಾಕುವ ಕ್ಲಿಪ್, ಬ್ಯಾಗ್, ಸುಟ್ಟ ಬಟ್ಟೆ ಮತ್ತು ಚರ್ಮದ ಪೀಸ್ ಅಲ್ಲಿ ಇದ್ದು, ಅವುಗಳನ್ನು ನೋಡಿ ತೆಗೆದುಕೊಂಡರು.

2. ಆನಂತರ ಬರವಣಿಗೆ ಮಾಡಿಕೊಂಡರು. ಆ ಬರವಣಿಗೆ ಈಗಾಗಲೇ ನಿಶಾನೆ ಪಿ 5 ಎಂದು ಗುರುತಿಸಿದ ಮಹಜರ್ ಆಗಿದ್ದು,

ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಶಾನೆ ಪಿ 5(ಸಿ) ಎಂದು ಗುರುತಿಸಿದೆ.

3. ಈಗಾಗಲೇ ಮುದ್ದೆಮಾಲು 2 ರಿಂದ 4, 7 ರಿಂದ 9 ಎಂದು ಗುರುತಿಸಿದ ಸ್ವತ್ತುಗಳನ್ನು ಈ ಸಾಕ್ಷಿದಾರರು ಅವರಿಗೆ ತೋರಿಸಿದಾಗ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ</u> ಶ್ರೀ.ಪಾರ್ಥ ಸಾರಥಿ ವಕೀಲರಿಂದ – ಆರೋಪಿ ಪರವಾಗಿಃ-**

4. ಪೊಲೀಸರು ಸಾಕ್ಷಿಯಾಗಿ ಬರಲು ನೊಟೀಸ್ ನೀಡಿಲ್ಲ. ಅಲ್ಲಿ ಬಿದ್ದಿದ್ದ ಬ್ಯಾಗ್ ಹೆಂಗಸರು ಹಿಡಿದುಕೊಳ್ಳುವ ವ್ಯಾನಿಟಿ ಬ್ಯಾಗ್ ಎಂದರೆ ಸರಿ. ಆ ವ್ಯಾನಿಟಿ ಬ್ಯಾಗ್‌ನಲ್ಲಿ ನೀರಿನ ಬಾಟಲ್ ಮತ್ತು ಚಿನ್ನದ ಒಡವೆಗಳು ಇದ್ದವು ಎಂದರೆ ಗೊತ್ತಿಲ್ಲ. ಪೊಲೀಸರು ಶವ ಬಿದ್ದಿದ್ದ ಸ್ಥಳದಿಂದ ಆ ಬ್ಯಾಗ್‌ನ್ನು ತೆಗೆದುಕೊಂಡರು. ಅವರು ನನ್ನ ಮುಂದೆ ಆ ಸ್ವತ್ತುಗಳಿಗೆ ಪ್ಯಾಕ್ ಮತ್ತು ಸೀಲ್ ಮಾಡಿಲ್ಲ. ಆ ಬ್ಯಾಗ್‌ನಲ್ಲಿ ಮೃತ ಮಹಿಳೆಯ ಒಡವೆಗಳು ಮತ್ತು ಆ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ದೇವರಾಜ ಭಟ್ಟ ಎಂ.)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.